22.3.2022 62

**ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಹರೀಶ್ ಕುಮಾರ್ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಸೂಚನೆಗೆ ಉತ್ತರ.**

ಪ್ರಶ್ನೆ: **ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾವೂರು ವಾರ್ಡಿನ 59ನೇ ಕಾವೂರು ಗ್ರಾಮದ ಸರ್ವೆ ನಂ. 133ರ ಅಂಶದಲ್ಲಿ ನಿರ್ಮಿಸಿರುವ ಪ್ರಾರ್ಥನಾ ಮಂದಿರದಲ್ಲಿ ಕಳೆದ 40 ವರ್ಷಗಳಿಂದ ಕ್ರಿಸ್ಮಸ್, ಜಪಮಾಲೆ, ಮಾಸ, ಸ್ವಾತಂತ್ರ್ಯ ದಿನಾಚರಣೆ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದು, ದುಷ್ಕರ್ಮಿಗಳು ಈ ಪ್ರಾರ್ಥನಾ ಮಂದಿರವನ್ನು ಅನುಕ್ರಮವಾಗಿ ಪ್ರವೇಶಿಸಿ, ಧ್ವಂಸಗೊಳಿಸಿ ದೇವರ ಮೂರ್ತಿ ಸೇರಿದಂತೆ ಮಂದಿರದಲ್ಲಿದ್ದ ಸಾಮಗ್ರಿಗಳನ್ನು ಲೂಟಿ ಮಾಡಿದ್ದು, ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಕುರಿತು.**

## ಸರ್ಕಾರದ ಹೇಳಿಕೆ

ಉತ್ತರ: ಮಂಗಳೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯ ಕಾವೂರು ಪೊಲೀಸ್ ಠಾಣಾ ಸರಹದ್ದಿನ ಕಾವೂರು ಗ್ರಾಮದ ಸರ್ವೇ ನಂಬರ್ 133ರಲ್ಲಿ ನಿರ್ಮಿಸಿರುವ ಪ್ರಾರ್ಥನಾ ಮಂದಿರಗಳನ್ನು ಅಕ್ರಮವಾಗಿ ಪ್ರವೇಶಿಸಿ ಧ್ವಂಸಗೊಳಿಸಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಆದರೆ ಕಾವೂರು ಗ್ರಾಮದ ಸರ್ವೇ ನಂಬರ್ 119/1ಎ(ಪಿ) ಯಲ್ಲಿ 0.05 ಸೆಂಟ್ಸ್ ಸರ್ಕಾರಿ ಜಮೀನಿನಲ್ಲಿ ಅಂಗನವಾಡಿ ಕಟ್ಟಡ ಕಟ್ಟಲು ಕಾಯ್ದಿರಿಸಿದ ಜಾಗದಲ್ಲಿ, ಸದರಿ ನಿವೇಶನದೊಳಗೆ ಸೈಂಟ್ ಆಂಟೋನಿಸ್ ಹೋಲಿ ಕ್ರಾಸ್ ಬಿಲ್ಡಿಂಗ್ ಕಮಿಟಿ (ರಿ) ಉರುಂದಾಡಿಗುಡ್ಡೆ ಪಂಜಿಮೊಗರು ಪಡಕೋಡಿ ಗ್ರಾಮ ಎಂಬ ಕಟ್ಟಡವಿದ್ದು ಅಂಗನವಾಡಿಗೆ ಕಾಯ್ದಿರಿಸಿದ ನಿವೇಶನದೊಳಗಿರುವ ಈ ಕಟ್ಟಡವನ್ನು ತೆರವುಗೊಳಿಸುವಂತೆ ತಹಶೀಲ್ದಾರ್ ರವರಿಗೆ ಲಿಖಿತವಾಗಿ ಪಿರ್ಯಾಧಿದಾರರು ದೂರನ್ನು ನೀಡಿರುತ್ತಾರೆ. ಸದರಿ ಜಾಗದಲ್ಲಿರುವ ಕಟ್ಟಡವನ್ನು ತೆರವುಗೊಳಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಯಾವುದೇ ಆದೇಶವಾಗಿರುವುದಿಲ್ಲ. ಸದರಿ ಕಟ್ಟಡವನ್ನು ಯಾರೋ ಆರೋಪಿತರು ಕೆಡವಿ ಹಾಕಿರುತ್ತಾರೆ. ಈ ಬಗ್ಗೆ ಕಾವೂರು ಠಾಣಾ ಮೊಕದ್ದಮೆ ಸಂಖ್ಯೆ 07/2022 ಕಲಂ: 427, 447 ಐಪಿಸಿ ಮತ್ತು 2(ಎ) ಕೆಪಿಡಿಪಿ ಎಲ್ ಕಾಯಿದೆ 1981 ರಂತೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ನಂತರ ತನಿಖೆ ನಡೆಸಿ ಆರೋಪಿ ಲತೀಶ್‌ನನ್ನು ದಸ್ತಗಿರಿ ಮಾಡಲಾಗಿರುತ್ತದೆ. ಇತರ ಆರೋಪಿತರ ಬಂಧನಕ್ಕೆ ಹಾಗೂ ದಾಖಲಾತಿ ಸಂಗ್ರಹಣೆ ಬಾಕಿ ಇರುತ್ತದೆ.

ತನಿಖೆಯಿಂದ ತಿಳಿದು ಬರುವ ವಿಷಯವೇನೆಂದರೆ, ಸದರಿ ಸ್ಥಳವನ್ನು ತೆರವುಗೊಳಿಸಲು ತಹಶೀಲ್ದಾರ್‌ರವರಿಗೆ ಸಿ.ಡಿ.ಪಿ.ಓ.ರವರು ಪತ್ರ ವ್ಯವಹಾರ ನಡೆಸಿರುವುದು ಹಾಗೂ ಸದರಿ ಅಂಗನವಾಡಿ ಕಟ್ಟಡಕ್ಕೆ ಮಾನ್ಯ ನ್ಯಾಯಾಲಯದ ದಾವೆ ಸಂಖ್ಯೆ: 71/2022 ದಿನಾಂಕ: 28.01.2022 ರಂತೆ ತಡೆಯಾಜ್ಞೆ ಇರುತ್ತದೆ.

(ಆರಗ ಜ್ಞಾನೇಂದ್ರ)
ಗೃಹ ಸಚಿವರು

**ಸಂಖ್ಯೆ: ಒಇ 56 ಎಸ್‌ಎಸ್‌ಟಿ 2022**

(62)

# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ ಹರೀಶ್‌ಕುಮಾರ್ ರವರು ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

ಪ್ರಶ್ನೆ: ಮಂಗಳೂರು ಮಹಾನಗರ ವ್ಯಾಪ್ತಿಯ ಕಾವೂರು ಗ್ರಾಮದ ಸರ್ವೆ ನಂ 133 ರಲ್ಲಿ ನಿರ್ಮಿಸಿರುವ ಪ್ರಾರ್ಥನಾ ಮಂದಿರಗಳಿಗೆ ಅಕ್ರಮವಾಗಿ ಪ್ರವೇಶಿಸಿ ದೇವರ ಮೂರ್ತಿಗಳನ್ನು ಧ್ವಂಸ ಗೊಳಿಸಿರುವ ಕುರಿತು.

ಉತ್ತರ: ಕಾವೂರು ಪೊಲೀಸ್ ಠಾಣಾ ವ್ಯಾಪ್ತಿಯ ಪಂಜಿಮೊಗರು ಪಡುಕೋಡಿ ಗ್ರಾಮದ ಸರ್ವೆ ನಂ 119/1ಎ1ಪಿ1 ಯಲ್ಲಿ ವಿಸ್ತೀರ್ಣ 0.05 ಎಕ್ರೆ ಜಮೀನು ಅಂಗನವಾಡಿ ಕಟ್ಟಡವಿರುವ ಜಾಗ ಆಗಿರುತ್ತದೆ. ಸೆಂಟ್ ಆಂಟೋನಿ ಹೋಲಿ ಕ್ರಾಸ್ ಬಿಲ್ಡಿಂಗ್ ಕಮಿಟಿ ರವರ ಹೆಸರಿನಲ್ಲಿರುವ ಜಾಗದ ಸರ್ವೆ ನಂ 133–ಪಿ4 0–03.5 ಎಕ್ರೆ ಜಮೀನು ಇರುತ್ತದೆ.

ಕಟ್ಟಡ ಧ್ವಂಸ ಮಾಡಿದ ಜಮೀನು ಸರ್ವೆ ನಂ 119/1ಎ1ಪಿ1 ಆಗಿದ್ದು ಈ ಜಮೀನಿನಲ್ಲಿ ಅಂಗನವಾಡಿ ಕೇಂದ್ರ ಕಾರ್ಯ ನಿರ್ವಹಿಸುತ್ತಿರುತ್ತದೆ. ಅಂಗನವಾಡಿ ಕೇಂದ್ರ ಸ್ಥಳವನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರವರ ಹೆಸರಿಗೆ ಕಾಯ್ದಿರಿಸಲಾಗಿದೆ.

ಧ್ವಂಸ ಮಾಡಿದ ಕಟ್ಟಡವು ಕ್ರೈಸ್ತರ ಪ್ರಾರ್ಥನಾ ಮಂದಿರ ಎಂದು ಹೇಳಲು ಯಾವುದೇ ಅಧಿಕೃತ ದಾಖಲೆ ಇರುವುದಿಲ್ಲ. ಕಟ್ಟಡ ಎದುರಿಗೆ ಕ್ರೈಸ್ತ ಧರ್ಮದ ಕ್ರಾಸ್ ಇದ್ದು ಅದಕ್ಕೆ ಯಾವುದೇ ಹಾನಿ ಯಾಗಿರುವುದಿಲ್ಲ, ಧ್ವಂಸಗೊಂಡ ಕಟ್ಟಡದಿಂದ ಸ್ವಲ್ಪ ಅಂತರದಲ್ಲಿ ಕ್ರಾಸ್ ಇರುತ್ತದೆ.

ದಿನಾಂಕ 24–05–2021 ರಂದು ಅಂಗನವಾಡಿ ಕಟ್ಟಡ ನಿರ್ಮಿಸಲು 16.50 ಲಕ್ಷ ಮಂಜೂರಾಗಿದ್ದು, ದಿನಾಂಕ 24–01–2022 ರಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತಹಶೀಲ್ದಾರ ಮಂಗಳೂರು ರವರಿಗೆ ಅರ್ಜಿಯನ್ನು ಸಲ್ಲಿಸಿ ಅಂಗನವಾಡಿ ನಿರ್ಮಾಣಕ್ಕೆ ಕಾಯ್ದಿರಿಸಿದ ಜಾಗವನ್ನು ಸ್ವಾಧೀನಪಡಿಸಿ ಅದರಲ್ಲಿರುವ ಕಟ್ಟಡವನ್ನು ತೆರವುಗೊಳಿಸಲು ಆದೇಶ ಮಾಡಲು ವಿನಂತಿಸಿಕೊಂಡಿದ್ದು ತಹಶೀಲ್ದಾರರಿಂದ ಯಾವುದೇ ತೆರವುಗೊಳಿಸುವ ಆದೇಶ ಹೊರಡಿಸಿರುವುದಿಲ್ಲ.

ನೊಂದಾಯಿತ ಸೆಂಟ್ ಆಂಟೋನಿ ಹೋಲಿ ಕ್ರಾಸ್ ಕಟ್ಟಡ ಕಮಿಟಿಯವರು ಮಂಗಳೂರಿನ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ 71/22 ರಲ್ಲಿ ದಿನಾಂಕ 28–01–2022 ರಲ್ಲಿ ನಿರ್ಭಂದಕ ಆಜ್ಞೆಯನ್ನು ಪಡೆದಿರುತ್ತಾರೆ.

ದಿನಾಂಕ 05–02–2022 ರಂದು ಸದರಿ ಅಂಗನವಾಡಿ ಕಟ್ಟಡವನ್ನು ಯಾರೋ ಅಪರಿಚಿತರು ಧ್ವಂಸ ಮಾಡಿದ್ದು ಈ ಬಗ್ಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನೀಡಿದ ಪಿರ್ಯಾದಿ ಮೇರೆಗೆ ಕಾವೂರು ಪೊಲೀಸ್ ಠಾಣಾ ಅ.ಕ್ರ ನಂ 07/2022 ಕಲಂ 427, 447 ಐಪಿಸಿ ಮತ್ತು ಕಲಂ 2 (ಎ) ಕೆಪಿಡಿಎಲ್‌ಪಿ ಆಕ್ಟ್ ರಂತೆ ಪ್ರಕರಣ ದಾಖಲಿಸಿ 2 ಆರೋಪಿತರನ್ನು ದಸ್ತಗಿರಿ ಮಾಡಿ ತನಿಖೆ ಮುಂದುವರೆಸಲಾಗಿದೆ.

...2

ದಿನಾಂಕ 24-02-2022 ರಂದು ಆಂಟೋನಿ ಪ್ರಕಾಶ ಲೋಬೋ ಅಧ್ಯಕ್ಷರು ಆಂಟೋನಿ ಹೋಲಿ ಕ್ರಾಸ್ ಕಟ್ಟಡ ಕಮಿಟಿ ರವರು ನೀಡಿದ ದೂರಿನ ಮೇರೆಗೆ ಕಾವೂರು ಪೊಲೀಸ್ ಠಾಣಾ ಅ.ಕ್ರ ನಂ 08/2022 ಕಲಂ 427, 447, 504, 506 ಜೊತೆಗೆ 34 ಐಪಿಸಿ ರಂತೆ ಪ್ರಕರಣ ದಾಖಲಿಸಿ ಪಿಎಸ್ಐ (ಕಾ &ಸು) ರವರು ತನಿಖೆ ನಡೆಸುತ್ತಿದ್ದು ಆಂಟೋನಿ ಪ್ರಕಾಶ ಲೋಬೋ ಅಧ್ಯಕ್ಷರು ಆಂಟೋನಿ ಹೋಲಿ ಕ್ರಾಸ್ ಕಟ್ಟಡ ಕಮಿಟಿ ರವರಿಗೆ ಧ್ವಂಸ ಗೊಂಡಿರುವ ಕಟ್ಟಡದ ಆರ್‌ಟಿಸಿ ಮತ್ತು ವಿದ್ಯುತ್ ಬಿಲ್ ಹಾಗೂ ಇತ್ಯಾದಿ ದಾಖಲಾತಿಗಳನ್ನು ಹಾಜರುಪಡಿಸುವಂತೆ ನೋಟೀಸನ್ನು ನೀಡಲಾಗಿದೆ.

ಮಂಗಳೂರು ನಗರ ಮಹಾ ನಗರ ಪಾಲಿಕೆಗೆ ಸೂಕ್ತ ದಾಖಲಾತಿಗಳನ್ನು ಒದಗಿಸುವಂತೆ ಕೋರಿಕೆ ಪತ್ರವನ್ನು ನೀಡಲಾಗಿದೆ.

ವಿವಾದಿತ ಸ್ಥಳಕ್ಕೆ ಪೊಲೀಸ್ ಆಯುಕ್ತರು ಸೇರಿದಂತೆ ಎಲ್ಲಾ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದು ಸ್ಥಳದಲ್ಲಿ ಯಾವುದೇ ಅಹಿತಕರ ಘಟನೆಯಾಗದಂತೆ ಸಿಬ್ಬಂದಿಗಳನ್ನು ನೇಮಕ ಮಾಡಿ ಸೂಕ್ತ ಬಂದೋಬಸ್ತ್ ಮಾಡಲಾಗಿದೆ.

ಧ್ವಂಸಗೊಂಡ ಕಟ್ಟಡದ ಎದುರಿಗೆ ಕ್ರೈಸ್ತ ಧರ್ಮದ ಕ್ರಾಸ್ ಇದ್ದು ಅದಕ್ಕೆ ಯಾವುದೇ ಹಾನಿಯಾಗಿರುವುದಿಲ್ಲ. ಅಲ್ಲಿ ಪ್ರಾರ್ಥನಾ ಸಭೆಗಳನ್ನು ಕಾಲ ಕಾಲಕ್ಕೆ ನಡೆಯುವಾಗ ಸೂಕ್ತ ಬಂದೋಬಸ್ತನ್ನು ಒದಗಿಸಲಾಗಿದೆ.

---

ಹೆಚ್‌ಡಿ 153 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು